# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ : ಆವೈ(ಮಲ್ಲೇಶ್ವರಂ)/ಪಿ.ಆರ್ /೬೧/07-08

ಆರೋಗ್ಯ ವೈದ್ಯಾಧಿಕಾರಿ(ಮಲ್ಲೇಶ್ವರಂ) ರವರ ಕಛೇರಿ
ಬೆಂಗಳೂರು, ದಿನಾಂಕ : 27.08.2007

## ಕಾರ್ಯಾದೇಶ

ವಿಷಯ : ಆಟೋ ಮಿನಿಡೋರ್‌ನ್ನು ವಾರ್ಡ್ ಸಂಖ್ಯೆ-6-ಎ(1) ರಲ್ಲಿ ಮನೆಗಳಲ್ಲಿ ಸಂಗ್ರಹವಾಗುವ ಕಸವನ್ನು ಸಂಗ್ರಹಿಸಿ ಸಾಗಿಸಲು ಖಾಸಗಿ ವಾಹನವನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: 1) ಮುಖ್ಯಆರೋಗ್ಯಾಧಿಕಾರಿ ಕಛೇರಿ ಸಂಖ್ಯೆ : ಪಿ.ಆರ್-181/07-08. ದಿನಾಂಕ : 03.08.2007.

2) ಆ.ಅ.ಪ/ಪಿ.ಆರ್ ನಂ.1357/07-08. ದಿ.24.08.2007.

ಆರೋಗ್ಯಾಧಿಕಾರಿ(ಮಲ್ಲೇಶ್ವರಂ) ವಲಯದ ಆರೋಗ್ಯದ ವಾರ್ಡ್ ನಂ.6/ಎ(1). ಸ್ವಚ್ಛತಾ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಖಾಸಗಿ ವಾಹನವಾದ ಆಟೋ(ಮಿನಿಡೋರ್) ಕಂಟೈನರ್‌ಗಳನ್ನು ಅಳವಡಿಸಿಕೊಂಡು ಚಾಲಕರ ಸಮೇತ ಒಬ್ಬರು ಕೆಲಸಗಾರರನ್ನು ಒದಗಿಸಿಕೊಂಡು ಕಿರಿದಾದ ರಸ್ತೆಗಳಿಂದ, ಮನೆ ಮನೆಗಳಿಂದ ಹಾಗೂ ಅಂಗಡಿಗಳಿಂದ ಕಸವನ್ನು ಸಂಗ್ರಹಿಸಿ ಸಾಗಾಣಿಕೆ ಮಾಡಲು ವಾಹನದ ಸಂಖ್ಯೆ : ಕೆಎ-04, ಎ-2649, ಅನ್ನು ಬಾಡಿಗೆಯ ಆಧಾರದ ಮೇಲೆ ದಿನಾಂಕ : 01.09.2007 ರಿಂದ ನಿರ್ವಹಿಸಿರುವ ಕೆಲಸವನ್ನು ಸ್ಥಿರೀಕರಿಸಿ ಈ ಮೇಲ್ಕಂಡ ಕೆಲಸಕ್ಕೆ ಒಂದು ತಿಂಗಳ ಅವಧಿಗೆ ಮೊತ್ತವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ. ನಿಗದಿಪಡಿಸಿರುವ ಒಂದು ತಿಂಗಳ ಮೊತ್ತ ರೂ.16,000/-(ಹದಿನಾರು ಸಾವಿರ ರೂಪಾಯಿಗಳು ಮಾತ್ರ) (ಆಟೋ(ಮಿನಿಡೋರ್) ಚಾಲಕ + 1 ಕೆಲಸಗಾರ ಸೇರಿ)

### ಷರತ್ತು ಹಾಗೂ ನಿಬಂಧನೆಗಳು

1. ಗುತ್ತಿಗೆದಾರರು ಕೆಲಸಕ್ಕಾಗಿ ನೇಮಕ ಮಾಡಿಕೊಳ್ಳುವ ವ್ಯಕ್ತಿಗಳಿಗೆ ಆಗಿರಬೇಕಾದ ಕನಿಷ್ಠ ವಯಸ್ಸು 18 ವರ್ಷ ತುಂಬಿರಬೇಕು. ಹಾಗೂ 55 ವರ್ಷ ವಯಸ್ಸು ಮೀರಿರಬಾರದು ಹಾಗೂ ಆರೋಗ್ಯ ಮತ್ತು ಸದೃಢ ಕಾರ್ಮಿಕರನ್ನು ಮಾತ್ರ ನೇಮಿಸತಕ್ಕದ್ದು. 18 ವರ್ಷ ವಯಸ್ಸಿಗಿಂದ ಕಡಿಮೆ ವಯಸ್ಸಿನ ಯಾವುದೇ ವ್ಯಕ್ತಿಯನ್ನು ಕೆಲಸಕ್ಕೆ ನೇಮಿಸಕೊಳ್ಳಬಾರದು.
2. ಕೇವಲ ಪುರುಷ ಕೆಲಸಗಾರರನ್ನು ಮಾತ್ರ ನೇಮಿಸತಕ್ಕದ್ದು.
3. ಕೆಲಸಗಾರರಿಗೆ ನೇರಳೆ ಬಣ್ಣದ ಮೇಲುಹೊದಿಕೆ(ಏಪ್ರಾನ್) ಒದಗಿಸತಕ್ಕದ್ದು.
4. ಸ್ವಚ್ಛತಾ ಕೆಲಸಕ್ಕೆ ಆಟೋ(ಮಿನಿಡೋರ್) ಗೈರುಹಾಜರಾದಲ್ಲಿ ಮಾಸಿಕ ಮೊತ್ತದ ಬಿಲ್ಲಿನಲ್ಲಿ ಕಟಾವು ಮಾಡಲಾಗುವುದು.
5. ಸಾರ್ವಜನಿಕರಿಂದ ಸ್ವಚ್ಛತೆ ಬಗ್ಗೆ ಯಾವುದೇ ದೂರು ಬರದಂತೆ ನೋಡಿಕೊಳ್ಳುವುದು.
6. ಕೆಲಸಗಾರರಿಗೆ ಕೈಗವಚಗಳನ್ನು ಒದಗಿಸತಕ್ಕದ್ದು.
7. ವಾಹನದ ಮುಂದೆ ವಾಹನದ ಸಂಖ್ಯೆ, ವಾರ್ಡ್ ಸಂಖ್ಯೆ ಹಾಗೂ ವಲಯದ ಹೆಸರು ಕಡ್ಡಾಯವಾಗಿ ಬರೆಯಬೇಕು.
8. ಬೆಳಗ್ಗೆ 7.00 ರಿಂದ 12.00 ಗಂಟೆಯವರೆಗೆ ಕಾರ್ಯನಿರ್ವಹಿಸತಕ್ಕದ್ದು.
9. ಪಾಲಿಕೆಯ ಪೌರಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಕೊಳ್ಳಬಾರದು.

ಮೇಲ್ಕಂಡ ಕೆಲಸದ ಆದೇಶವು ದಿನಾಂಕ : 01.09.2007 ರಿಂದ ತಾತ್ಕಾಲಿಕವಾಗಿ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

ಗೆ,
ಶ್ರೀ ಬಿ.ಕೆ.ಚಂದ್ರಶೇಖರ್
ನಂ.5, ರಾಬರ್ಟ್‌ಸನ್ ರೋಡ್,
ಕ್ಲೀವ್‌ಲ್ಯಾಂಡ್ ಟೌನ್, ಬೆಂಗಳೂರು-05.

ಆರೋಗ್ಯ ವೈದ್ಯಾಧಿಕಾರಿ(ಮಲ್ಲೇಶ್ವರಂ)
ಬೃ.ಬೆಂ.ಮ.ಪಾಲಿಕೆ, ಬೆಂಗಳೂರು

ಪ್ರತಿಯನ್ನು :
ಜಂಟಿ ಆಯುಕ್ತರು(ಪಶ್ಚಿಮ) ರವರ ಅವಗಾಹನೆಗೆ,
ಆರೋಗ್ಯಾಧಿಕಾರಿಗಳು(ಪಶ್ಚಿಮ) ರವರ ಅವಗಾಹನೆಗೆ,
ಸಹಾಯಕ ನಿಯಂತ್ರಕರು ಹಣಕಾಸು(ಪಶ್ಚಿಮ) ರವರಿಗೆ,
ಸಂಬಂಧಪಟ್ಟ ಗುತ್ತಿಗೆದಾರರಿಗೆ/ಕಛೇರಿ ಕಡತಕ್ಕೆ